**ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯದಲ್ಲಿ, ಧಾರವಾಡ**

**ಪ್ರಕರಣ ಸಂಖ್ಯೆಃ 173/2009**

**ಪಿರ್ಯಾಧಿದಾರರು:**

ಕರ್ನಾಟಕ ರಾಜ್ಯದ ಪರವಾಗಿ

ಸಾರ್ವಜನಿಕ ಅಭಿಯೋಜಕರು ಧಾರವಾಡ.

ವಿರುದ್ಧ

**ಆರೋಪಿತರು :**

ಮಲ್ಲಿಕಾಜುರ್ನ ತಂದೆ ರಾಮಕೃಷ್ಣ ಹಡಪದ

ಮತ್ತು ಇನ್ನಿಬ್ಬರು.

**: ದೋಷಾರೋಪಣೆ :**

ಧಾರವಾಡ ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರಾದ ಶ್ರೀ ಉಮೇಶ.ಎಂ.ಅಡಿಗ, ಬಿಕಾಂ ಎಲ್.ಎಲ್.ಬಿ (ಸ್ಪೇ) ಆದ ನಾನು ಈ ಕೆಳಕಂಡ ಆರೋಪಿತರಾದ

1. ಮಲ್ಲಿಕಾರ್ಜುನ ತಂದೆ ರಾಮಕೃಷ್ಣ ಹಡಪದ,
   ವಯಾಃ 23 ವರ್ಷಗಳು, ಉಃ ಹೇರ್ ಕಟಿಂಗ್,
   ಸಾಃ ಮುಗದ ಗ್ರಾಮತಾಃಜಿಃ ಧಾರವಾಡ.
   ಹಾಲಿಃ ಧಾರವಾಡ ಕೆಲಗೇರಿ ಹರಿಜನಕೇರಿ ಮಂಜರಗಿ ಪ್ಲಾಟ್...

2. ನವೀನ ತಂದೆ ಸುರೇಶ ಉಗರಗೋಳ,
   ವಯಾಃ 23 ವರ್ಷಗಳು, ಉಃ ಪೆಂಡಾಲ ಹಾಕುವ ಕೂಲಿ ಕೆಲಸ
   ಸಾಃ ಮುಗದ ಗ್ರಾಮತಾಃಜಿಃ ಧಾರವಾಡ.
   ಹಾಲಿಃ ಕೇರ್ ಆಫ್ ರಾಯಪ್ಪ ಛಲವಾದಿ,
   ನೆಹರುನಗರ ಲಾಸ್ಟ್ ಸ್ಟಾಪ್.. ಧಾರವಾಡ...

3. ರಾಜೇಶ ತಂದೆ ಬಾಳಪ್ಪ ಪೂಜಾರ,
   ವಯಾಃ19 ವರ್ಷಗಳು, ಉಃ ಪೆಂಡಾಲ ಹಾಕುವ ಕೂಲಿ ಕೆಲಸ ,
   ಸಾಃ ನೆಹರು ನಗರ, ಹನುಮಂತದೇವರ ಗುಡಿ ಹತ್ತಿರ, ಧಾರವಾಡ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ನಿಮ್ಮಲ್ಲಿಯ 1 ನೇ ಆರೋಪಿಯಾದ ನೀನು ಪಿರ್ಯಾದಿಯ ತಮ್ಮನಾದ ನಾಗರಾಜ ಹರಪನಳ್ಳಿ ಈತನ ಹತ್ತಿರ ನಿನ್ನ ತಂಗಿಯ ಮದುವೆಗೆ ರೂ.1 ಲಕ್ಷ ಹಣವನ್ನು ಕೈಗಡ ಸಾಲವಾಗಿ ತೆಗೆದುಕೊಂಡಿದ್ದು, ಆ ಹಣವನ್ನು ಮೃತ ನಾಗರಾಜ ನಿನಗೆ ಮರಳಿ ಕೊಡಲು ಕೇಳ ತೊಡಗಿದ್ದು, ಅದರಿಂದ ಪರಸ್ಪರ ನಿಮ್ಮಬ್ಬರ ನಡುವೆ ಆಗಾಗ ಜಗಳವಾಗುತ್ತಿದ್ದು, ನಾಗರಾಜನು, ಮುಗದ ಗ್ರಾಮದಲ್ಲಿರುವ 1 ನೇ ಆರೋಪಿತನಾದ ನಿನ್ನ ಮನೆಗೆ ಹೋಗಿ ನಿನ್ನ ತಾಯಿ ಹಾಗೂ ಗರ್ಭಿಣಿ ತಂಗಿಗೆ ಬೈದಾಡಿ ಬಂದಿದ್ದರಿಂದ, ನೀನು ನಾಗರಾಜನ ಮೇಲೆ ಸಿಟ್ಟಾಗಿ, ನಿನ್ನ ಗೆಳೆಯರಾದ 2 ಮತ್ತು 3 ನೇ ಆರೋಪಿಗಳೊಂದಿಗೆ ಸೇರಿಕೊಂಡು ದಿನಾಂಕಃ 25/7/2019 ರಂದು ಧಾರವಾಡ ಶ್ರೀನಗರ ಸರ್ಕಲ್ ಹತ್ತಿರ ಅನುಪಮ ಬಾರ್ ಹತ್ತಿರ, ನಾಗರಾಜ ಇತನಿಗೆ ಮದ್ಯ ಸೇವನೆ ಮಾಡಿಸಿ ಕಣ್ಣಿನಲ್ಲಿ ಕಾರದ ಪುಡಿ ಎರಚಿ ಬಡಿಗೆಗಳಿಂದ ಹೊಡೆದು ಕೊಲೆ ಮಾಡುವ ಒಳಸಂಚು ರೂಪಿಸಿ, ಆ ಮೂಲಕ 1 ರಿಂದ 3 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 120-ಬಿ ಸಹ ಕಲಂ 302 ರಡಿಯಲ್ಲಿ ಶಿಕ್ಷಾಹರ್ವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ, ಎಂದು ನಿಮ್ಮ ಮೇಲೆ ಆಪಾದನೆ ಮಾಡಿದ್ದೇನೆ.

ಮೇಲ್ಕಾಣಿಸಿದಂತೆ 1 ರಿಂದು 3 ನೇ ಆರೋಪಿತರಾದ ನೀವು ನಾಗರಾಜನ ಕೊಲೆ ಮಾಡಲು ರೂಪಿಸಿದ ಒಳಸಂಚಿನ ಪ್ರಕಾರ ದಿನಾಂಕಃ26/7/2019 ರಂದು ಮಧ್ಯಾಹ್ನ 3-37 ಗಂಟೆಯಿಂದ ಸಂಜೆ 4-55 ಗಂಟೆ ನಡುವಿನ ಅವಧಿಯಲ್ಲಿ ಧಾರವಾಡ ಉಪನಗರ ಠಾಣಾ ಹದ್ದಿ ವ್ಯಾಪ್ತಿಯ ಕೆಯುಡಿ ಆವರಣದಲ್ಲಿರುವ ವುಮೆನ್ಸ್ ಹಾಸ್ಟೆಲ್ ಹಿಂಭಾಗದಲ್ಲಿರುವ ನೀಲಗಿರಿ ತೋಪಿಗೆ, 1 ಮತ್ತು 2 ಆರೋಪಿತರಾದ ನೀವು ನಾಗರಾಜನನ್ನು ಕರೆದುಕೊಂಡು ಹೋಗಿ ಆತನಿಗೆ ಮದ್ಯ ಸೇವನೆ ಮಾಡಿಸಿದ್ದು, ನಂತರ 1 ನೇ ಆರೋಪಿತನಾದ ನೀನು ನಾಗರಾಜನ ಕೊಲೆ ಮಾಡಬೇಕೆನ್ನುವ ಉದ್ದೇಶದಿಂದ ಆತನ ಜೊತೆಗೆ ತಂಟೆ ತೆಗೆದು, ಸ್ಥಳದಲ್ಲಿ ಬಚ್ಚಿಟ್ಟಿದ್ದ ಕಟ್ಟಿಗೆ ಮುಂಡಾ ತೆಗೆದುಕೊಂಡು ನಾಗರಾಜ ಹರಪನಹಳ್ಳಿ ಈತನ ಬಲ ಕೆನ್ನೆಗೆ ಹೊಡೆದಿದ್ದು, 3 ನೇ ಆರೋಪಿತನಾದ ನೀನು ಮೊದಲೇ ಬಚ್ಚಿಟ್ಟಿದ್ದ ಕಟ್ಟಿಗೆ ಮುಂಡಾ ತೆಗೆದುಕೊಂಡು ನಾಗರಾಜನ ಕಾಲಿಗೆ ಹೊಡೆದಿದ್ದು, 2 ನೇ ಆರೋಪಿತನಾದ ನೀನು ನಿನ್ನ ಹತ್ತಿರ ಇದ್ದ ಕಾರದ ಪುಡಿಯನ್ನು ನಾಗರಾಜನ ಕಣ್ಣಿಗೆ ಎರಚಿದ್ದು, ನಾಗರಾಜನು ಜೀವ ಭಯದಿಂದ ಸ್ವಲ್ಪ ದೂರ ಓಡಿ ಇಳಿಜಾರಿನಲ್ಲಿ ಬಿದ್ದಾಗ 1 ನೇ ಆರೋಪಿತನಾದ ನೀನು ನಾಗರಾಜನ ತಲೆಗೆ ಜೋರಾಗಿ ನಿನ್ನ ಕೈಯಲ್ಲಿದ ಕಟ್ಟಿಗೆ ಮುಂಡಾದಿಂದ 4-5 ಸಲ ಜೋರಾಗಿ ಹೊಡೆದು ಮಾರಣಾಂತಿಕ ಗಾಯಪಡಿಸಿದ್ದು, 3 ನೇ ಆರೋಪಿತನಾದ ನೀನು

ನಾಗರಾಜನ ಮೈ ಕೈಗೆ ಸಿಕ್ಕ ಸಿಕ್ಕಲ್ಲಿ ಹೊಡೆದು, ಅಂತಹ ಗಾಯಗಳಿಂದ ನಾಗರಾಜನು ಮೃತನಾಗಿದ್ದು, 1 ರಿಂದ 3 ನೇ ಆರೋಪಿತರಾದ ನೀವು, ನಾಗರಾಜನ ಕೊಲೆ ಮಾಡಿದ್ದು, ಕಾರಣ ನೀವೆಲ್ಲರೂ ಭಾರತೀಯ ದಂಡ ಸಂಹಿತೆಯ ಕಲಂ 302 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಿದ್ದೇನೆ.

ಈ ಮೇಲ್ಕಾಣಿಸಿದ ಅಪರಾಧದಡಿಯಲ್ಲಿ ನಿಮ್ಮನ್ನು ನನ್ನ ಅಧಿವಿಚಾರಣಗೊಳಪಡಿಸಲು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 14 ನೇ ಡಿಸೆಂಬರ್, 2020.

(ಉಮೇಶ.ಎಂ.ಅಡಿಗ),
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯದಲ್ಲಿ,
ಧಾರವಾಡ.

**ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯದಲ್ಲಿ, ಧಾರವಾಡ**

ಪ್ರಕರಣ ಸಂಖ್ಯೆ: ಎಸ್ ಸಿ, ನಂ.173/2019

1 ನೇ ಆರೋಪಿ

ಆರೋಪಿತನ ಹೆಸರುಃ ಮಲ್ಲಿಕಾರ್ಜುನ ಹಡಪದ.

ತಂದೆಯ ಹೆಸರುಃ ರಾಮಕೃಷ್ಣ

ವಯಸ್ಸು ಃ 23 ವರ್ಷ

ಉದ್ಯೋಗ ಃ ಹೇರ್ ಕಟಿಂಗ್,

ವಾಸಸ್ಥಳ ಃ ಸಾಃ ಮುಗದ ಗ್ರಾಮತಾಃಜಿಃ ಧಾರವಾಡ.
ಹಾಲಿಃ ಧಾರವಾಡ ಕೆಲಗೇರಿ ಹರಿಜನಕೇರಿ
ಮಂಜರಗಿ ಪ್ಲಾಟ್...

ಆರೋಪಿಯ ಹೇಳಿಕೆ

ಪ್ರಶ್ನೆ 1 ನಿನಗೆ ಈಗ ಓದಿ ಹೆಳಿ ವಿವರಿಸಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡು ಅರ್ಥ ಮಾಡಿಕೊಂಡೆಯಾ ?

**ಉತ್ತರ**

ಪ್ರಶ್ನೆ 2 ನೀನು ತಪ್ಪು ಮಾಡಿರುವುದಾಗಿ ಒಪ್ಪಿಕೊಳ್ಳುವೆಯೋ ಅಥವಾ ವಿಚಾರಣೆಯಾಗಬೇಕೆನ್ನುವೆಯೋ ?

**ಉತ್ತರ**

ದಿನಾಂಕ 24 ನೇ ನವೆಂಬರ 2020 ರಂದು ಮೇಲಿನ ದೋಷಾರೋಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸುತ್ತೇನೆ.

(ಉಮೇಶ.ಎಂ.ಅಡಿಗ),
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು.
ಧಾರವಾಡ .

**ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯದಲ್ಲಿ, ಧಾರವಾಡ**

ಪ್ರಕರಣ ಸಂಖ್ಯೆಃ ಎಸ್ ಸಿ, ನಂ.173/2019

2 ನೇ ಆರೋಪಿ

ಆರೋಪಿತನ ಹೆಸರುಃ ನವೀನ ಉಗರಗೋಳ,

ತಂದೆಯ ಹೆಸರುಃ ಸುರೇಶ

ವಯಸ್ಸು ಃ 23 ವರ್ಷ

ಉದ್ಯೋಗ ಃ ಪೆಂಡಾಲ ಹಾಕುವ ಕೂಲಿ ಕೆಲಸ

ವಾಸಸ್ಥಳ ಃ ಸಾಃ ಮುಗದ ಗ್ರಾಮತಾಃಜಿಃ ಧಾರವಾಡ.
ಹಾಲಿಃ ಕೇರ್ ಆಫ್ ರಾಯಪ್ಪ ಛಲವಾದಿ,
ನೆಹರುನಗರ ಲಾಸ್ಟ್ ಸ್ಟಾಪ್.. ಧಾರವಾಡ...

ಆರೋಪಿಯ ಹೇಳಿಕೆ

ಪ್ರಶ್ನೆ 1 ನಿನಗೆ ಈಗ ಓದಿ ಹೆಳಿ ವಿವರಿಸಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡು ಅರ್ಥ ಮಾಡಿಕೊಂಡೆಯಾ ?

**ಉತ್ತರ**

ಪ್ರಶ್ನೆ 2 ನೀನು ತಪ್ಪು ಮಾಡಿರುವುದಾಗಿ ಒಪ್ಪಿಕೊಳ್ಳುವೆಯೋ ಅಥವಾ ವಿಚಾರಣೆಯಾಗಬೇಕೆನ್ನುವೆಯೋ ?

**ಉತ್ತರ**

ದಿನಾಂಕ 24 ನೇ ನವೆಂಬರ 2020 ರಂದು ಮೇಲಿನ ದೋಷಾರೋಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸುತ್ತೇನೆ.

(ಉಮೇಶ.ಎಂ.ಅಡಿಗ),
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು.
ಧಾರವಾಡ .

**ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಲಯದಲ್ಲಿ, ಧಾರವಾಡ.**

ಪ್ರಕರಣ ಸಂಖ್ಯೆಃ ಎಸ್ ಸಿ, ನಂ.173/2019

3 ನೇ ಆರೋಪಿ

ಆರೋಪಿತನ ಹೆಸರುಃ ರಾಜೇಶ ಪೂಜಾರ

ತಂದೆಯ ಹೆಸರುಃ ಬಾಳಪ್ಪ

ವಯಸ್ಸು ಃ 19 ವರ್ಷ

ಉದ್ಯೋಗ ಃ ಪೆಂಡಾಲ ಹಾಕುವ ಕೂಲಿ ಕೆಲಸ.

ವಾಸಸ್ಥಳ ಃ ಸಾಃ ನೆಹರು ನಗರ, ಹನುಮಂತದೇವರ ಗುಡಿ ಹತ್ತಿರ, ಧಾರವಾಡ.

ಆರೋಪಿಯ ಹೇಳಿಕೆ

ಪ್ರಶ್ನೆ 1 ನಿನಗೆ ಈಗ ಓದಿ ಹೆಳಿ ವಿವರಿಸಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡು ಅರ್ಥ ಮಾಡಿಕೊಂಡೆಯಾ ?

**ಉತ್ತರ**

ಪ್ರಶ್ನೆ 2 ನೀನು ತಪ್ಪು ಮಾಡಿರುವುದಾಗಿ ಒಪ್ಪಿಕೊಳ್ಳುವೆಯೋ ಅಥವಾ ವಿಚಾರಣೆಯಾಗಬೇಕೆನ್ನುವೆಯೋ ?

**ಉತ್ತರ**

ದಿನಾಂಕ 24 ನೇ ನವೆಂಬರ 2020 ರಂದು ಮೇಲಿನ ದೋಷಾರೋಣೆಯನ್ನು ಆರೋಪಿಗೆ ಓದಿ, ವಿವರಿಸಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.

(ಉಮೇಶ.ಎಂ.ಅಡಿಗ),
ಪ್ರಧಾನ ಜಿಲ್ಲಾ ವ ಸತ್ರ ನ್ಯಾಯಾಧೀಶರು.
ಧಾರವಾಡ.